# ಇಬ್ನ್ ಅಬ್ಬಾಸ್(ﷺ) ಮತ್ತು ಖವಾರಿಜ್‌ಗಳ ಮಧ್ಯೆ ಜರುಗಿದ ಒಂದು ಮಹಾ ಸಂವಾದ

[المناقشة الكبرى بين ابن عباس (رضي الله عنه) والخوارج ]

**[Kannada – ಕನ್ನಡ – كنادي ]**


**ಮುಹಮ್ಮದ್ ಹಂಝಾ ಪುತ್ತೂರು**

**محمد حمزة بتوري**



IslamHouse.com

**1436 – 2015**

بِسْمِ اللهِ الرَّحْمَـنِ الرَّحِيم

ಅಬ್ದುಲ್ಲಾಹ್ ಇಬ್ನ್ ಅಬ್ಬಾಸ್(﵄)ರವರು ಹೇಳುತ್ತಾರೆ:

ಹರೂರಿಯ್ಯಗಳು (ಖವಾರಿಜ್‌ಗಳು) ಬಂಡಾಯವೆದ್ದ ಬಳಿಕ ಅವರು ಒಂದು ಏಕಾಂತ ಸ್ಥಳದಲ್ಲಿ ವಾಸಿಸತೊಡಗಿದರು. ಅವರು 6,000 ಜನರಿದ್ದರು. ಅವರು ಅಲೀ(ﷺ)ರವರ ವಿರುದ್ಧ ಬಂಡಾಯವೇಳುವ ವಿಷಯದಲ್ಲಿ ಒಗ್ಗಟ್ಟಾಗಿದ್ದರು.

ಜನರು ಪದೇ ಪದೇ ಅಲೀ(ﷺ)ರವರ ಬಳಿ ಬಂದು ಹೇಳುತ್ತಿದ್ದರು: "ಯಾ ಅಮೀರಲ್ ಮುಅ್‌ಮಿನೀನ್, ಈ ಜನರು ತಮ್ಮ ವಿರುದ್ಧವೇಕೆ ಬಂಡಾಯವೆದ್ದಿದ್ದಾರೆ?"

ಅಲೀ(ﷺ)ರವರು ಹೇಳುತ್ತಿದ್ದರು: "ಅವರನ್ನು ಬಿಟ್ಟುಬಿಡಿ. ಅವರು ನನ್ನೊಂದಿಗೆ ಯುದ್ಧ ಮಾಡುವ ತನಕ ನಾನು ಅವರೊಂದಿಗೆ ಯುದ್ಧ ಮಾಡಲಾರೆ. ಅವರು ಅದನ್ನು ಮಾಡುವರು."

ಹೀಗಿರುವಾಗ ಒಂದು ದಿನ ಝುಹ್ರ್ ನಮಾಝ್‌ಗೆ ಮುಂಚೆ ನಾನು ಅಲೀ(ﷺ)ರವರ ಬಳಿಗೆ ಬಂದು ಹೇಳಿದೆ: "ಯಾ ಅಮೀರಲ್ ಮುಅ್‌ಮಿನೀನ್, ಸ್ವಲ್ಪ ತಂಪಾಗುವ ತನಕ ನಮಾಝನ್ನು ವಿಳಂಬ ಮಾಡಿರಿ. ಅಷ್ಟರಲ್ಲಿ ನಾನು ಅವರೊಂದಿಗೆ ಮಾತನಾಡಿ ಬರುತ್ತೇನೆ."

ಅಲೀ(ﷺ)ರವರು ಹೇಳಿದರು: "ಖಂಡಿತವಾಗಿಯೂ ನಾನು ನಿನ್ನ ಬಗ್ಗೆ (ಅವರು ನಿನಗೇನಾದರೂ ಮಾಡುವರೆಂದು) ಭಯಪಡುತ್ತೇನೆ."

ನಾನು ಹೇಳಿದೆ: "ಖಂಡಿತ ಇಲ್ಲ, ನಾನೊಬ್ಬ ಸದ್ಗುಣದ ಮನುಷ್ಯನೆಂದು ಎಲ್ಲರಿಗೂ ಗೊತ್ತಿದೆ. ನಾನು ಇದುವರೆಗೂ ಯಾರಿಗೂ ಕೇಡು ಬಗೆದಿಲ್ಲ."

ತರುವಾಯ ಅವರು ನನಗೆ ಅನುಮತಿ ನೀಡಿದರು. ನಾನು ಅಂದವಾದ ಉಡುಪನ್ನು ತೊಟ್ಟೆ. ಅದು ಯಮನ್‌ನಲ್ಲಿ ಲಭ್ಯವಿರುವ ಅತ್ಯುತ್ತಮ ಉಡುಪಾಗಿತ್ತು. ನಾನು ನನ್ನ ತಲೆಗೂದಲನ್ನು ಬಾಚಿದೆ. ತರುವಾಯ ಮಧ್ಯಾಹ್ನದ ಹೊತ್ತಿನಲ್ಲಿ ಅವರು ಆಹಾರ ಸೇವಿಸುತ್ತಿರುವಾಗ ನಾನು ಅವರ ಬಳಿಗೆ ಹೋದೆ.

ನಾನು ಅಲ್ಲಿ ಕಂಡ ಜನರು, ಆರಾಧನಾ ಕರ್ಮಗಳಲ್ಲಿ ಅವರಷ್ಟು ಪರಿಶ್ರಮಿಸು ವವರನ್ನು ನಾನು ಕಂಡಿರಲಿಲ್ಲ; (ನಿರಂತರ) ಸುಜೂದ್‌ನಿಂದಾಗಿ ಅವರ ಹಣೆಗಳಲ್ಲಿ ಗಾಯಗಳು ಮೂಡಿದ್ದವು; ಅವರ ಅಂಗೈಗಳು ಒಂಟೆಯ ಪಾದದಂತೆ ಒರಟಾಗಿದ್ದವು; ಅವರು ಈಗಷ್ಟೇ ತೊಳೆದ ಕೊಳೆ ತುಂಬಿದ ಉದ್ದ ನಿಲುವಂಗಿಯನ್ನು ಧರಿಸಿದ್ದರು. ಅವರ ಮುಖಗಳು ಸುಸ್ತಿನಿಂದ ಕಳೆಗುಂದಿತ್ತು. ನಾನು ಅವರಿಗೆ ಸಲಾಮ್ ಹೇಳಿದೆ.

ಅವರು ಹೇಳಿದರು: "ಸ್ವಾಗತ, ಅಬ್ಬಾಸ್‌ರ ಪುತ್ರರೇ, ತಾವು ಧರಿಸಿರುವ ಈ ನಿಲುವಂಗಿ ಏನು?"

ನಾನು ಕೇಳಿದೆ: "ನೀವು ನನ್ನಲ್ಲಿ ಯಾವ ಕೊರತೆಯನ್ನು ಕಾಣುತ್ತಿರುವಿರಿ? ಯಮನ್ ನಲ್ಲಿ ಸಿಗಬಹುದಾದ ಅತ್ಯುತ್ತಮ ಉಡುಪನ್ನು ಪ್ರವಾದಿ(ﷺ)ರವರು ಧರಿಸಿದ್ದನ್ನು ನಾನು ಕಂಡಿದ್ದೇನೆ."

ನಂತರ ನಾನು ಈ ಆಯತ್ತನ್ನು ಓದಿದೆ:

﴿ قُلْ مَنْ حَرَّمَ زِينَةَ اللَّهِ الَّتِي أَخْرَجَ لِعِبَادِهِ وَالطَّيِّبَاتِ مِنَ الرِّزْقِ ﴾

"(ಓ ಪ್ರವಾದಿಯವರೇ!) ಹೇಳಿರಿ: ಅಲ್ಲಾಹು ಅವನ ದಾಸರಿಗಾಗಿ ಉತ್ಪಾದಿಸಿರುವ ಅಲಂಕಾರ ವಸ್ತುಗಳನ್ನು ಮತ್ತು ಉತ್ತಮ ಆಹಾರಗಳನ್ನು ನಿಷಿದ್ಧಗೊಳಿಸಿದವರು ಯಾರು?" [ಕುರ್‌ಆನ್ 7:32]

ಅವರು ಕೇಳಿದರು: "ತಾವು ಇಲ್ಲಿಗೆ ಬಂದ ವಿಷಯವೇನು?"

ನಾನು ಹೇಳಿದೆ: "ನಾನು ನಿಮ್ಮ ಬಳಿಗೆ ಅಲ್ಲಾಹನ ಸಂದೇಶವಾಹಕರ ಸಹಾಬಾಗಳ ಕಡೆಯಿಂದ, (ಅಂದರೆ) ಮುಹಾಜಿರ್ ಮತ್ತು ಅನ್ಸಾರ್‌ಗಳ ಬಳಿಯಿಂದ ಹಾಗೂ ಪ್ರವಾದಿ(ﷺ)ರವರ ಅಳಿಯನೂ ಆಗಿರುವ, ಅವರ

ಚಿಕ್ಕಪ್ಪರ ಮಗನ [ಅಲೀ(ﷺ)ರವರ] ಬಳಿಯಿಂದ ಬಂದಿರುವೆನು. ಕುರ್‌ಆನ್ ಅವತೀರ್ಣಗೊಂಡಿರುವುದು ಅವರ (ಸಹಾಬಾಗಳ) ಮೇಲಾಗಿದೆ. ಅದರ (ಕುರ್‌ಆನಿನ) ಬಗ್ಗೆ ನಿಮಗಿಂತಲೂ ಹೆಚ್ಚು ಜ್ಞಾನವಿರುವುದು ಅವರಿಗಾಗಿದೆ. ಅವರಲ್ಲಿ (ಸಹಾಬಾಗಳಲ್ಲಿ) ಸೇರಿದ ಯಾರೂ ನಿಮ್ಮೊಂದಿಗಿಲ್ಲ. ಅವರು (ಸಹಾಬಾಗಳು) ಏನು ಹೇಳುತ್ತಾರೋ ಅದನ್ನು ನಿಮಗೆ ತಿಳಿಸಲು ಮತ್ತು ನೀವು ಏನು ಹೇಳುತ್ತೀರೋ ಅದನ್ನು ಅವರಿಗೆ ತಿಳಿಸಲು ನಾನು ಬಂದಿದ್ದೇನೆ."

ಆಗ ಅವರ ಪೈಕಿ ಒಂದು ಗುಂಪು ಹೇಳಿತು: "ನೀವು ಕುರೈಶಿಗಳೊಂದಿಗೆ ಸಂವಾದ ಮಾಡಬಾರದು. ಯಾಕೆಂದರೆ ಅಲ್ಲಾಹು (ಅಝ್ಝ ವಜಲ್ಲ್) ಹೇಳಿದ್ದಾನೆ:

﴿ بَلْ هُمْ قَوْمٌ خَصِمُونَ ﴾

"ಅಲ್ಲ, ಅವರು ಜಗಳಗಂಟಿ ಜನರಾಗಿರುವರು." [ಕುರ್‌ಆನ್ 43:58]

ತರುವಾಯ ಅವರಲ್ಲಿ ಒಂದು ಗುಂಪು ನನ್ನೆಡೆಗೆ ತಿರುಗಿತು. ಅವರಲ್ಲಿ ಸೇರಿದ ಎರಡು ಮೂರು ಜನರು ಹೇಳಿದರು: "ಖಂಡಿತವಾಗಿಯೂ ನಾವು ಇವರೊಂದಿಗೆ ಮಾತನಾಡುವೆವು."

ನಾನು ಹೇಳಿದೆ: "ಮುಂದೆ ಬನ್ನಿರಿ. ರಸೂಲುಲ್ಲಾಹಿ(ﷺ)ರವರ ವಿರುದ್ಧ ಮತ್ತು ಅವರ ಚಿಕ್ಕಪ್ಪನ ಮಗನ [ಅಲೀ(ﷺ)ರವರ] ವಿರುದ್ಧ ನಿಮಗಿರುವ ದ್ವೇಷವಾದರೂ ಏನು?"

ಅವರು ಹೇಳಿದರು: "ಮೂರು ಸಮಸ್ಯೆಗಳು."

ನಾನು ಕೇಳಿದೆ: "ಅದೇನೆಂದು ಹೇಳಿರಿ."

ಅವರು ಹೇಳಿದರು: "ಅದರಲ್ಲಿ ಮೊದಲನೆಯದು ಏನೆಂದರೆ ಅವರು [ಅಲೀ(ﷺ)ರವರು] ಅಲ್ಲಾಹನಿಗೆ ಸಂಬಂಧಿಸಿದ ವಿಷಯದಲ್ಲಿ ತೀರ್ಪು ನೀಡಲು ಜನರನ್ನು ನೇಮಿಸಿದ್ದಾರೆ. ಆದರೆ ಅಲ್ಲಾಹು ಹೇಳುತ್ತಾನೆ:

﴿ إِنِ الْحُكْمُ إِلَّا لِلَّهِ ﴾

"ತೀರ್ಪು ನೀಡುವ ಅಧಿಕಾರವಿರುವುದು ಅಲ್ಲಾಹನಿಗೆ ಮಾತ್ರವಾಗಿದೆ." [ಕುರ್‌ಆನ್ 6:57; 12:40; 12:67]

ಹೀಗಿರುವಾಗ ತೀರ್ಪು ನೀಡಲು ಜನರಿಗೆ ಏನು ಅಧಿಕಾರವಿದೆ?"

ನಾನು ಹೇಳಿದೆ: "ಸರಿ, ಇದು ಮೊದಲನೆ ಸಮಸ್ಯೆ."

ಅವರು ಹೇಳಿದರು: "ಎರಡನೆ ಸಮಸ್ಯೆಯ ಬಗ್ಗೆ ಹೇಳುವುದಾದರೆ, ಅವರು [ಅಲೀ(ﷺ)ರವರು] ಯುದ್ಧ ಮಾಡಿದರು. ಆದರೆ ಅವರು ಯುದ್ಧಕೈದಿಗಳನ್ನು ಸೆರೆಹಿಡಿಯುವುದಾಗಲಿ, ಸಮರಾರ್ಜಿತ ಸೊತ್ತನ್ನು ಪಡೆಯುವುದಾಗಲಿ ಮಾಡಿಲ್ಲ. ಅವರು [ಅಲೀ(ﷺ)ರವರ ವಿರುದ್ಧ ಯುದ್ಧ ಮಾಡಿದವರು) ಅವಿಶ್ವಾಸಿಗಳಾಗಿದ್ದರೆ ಅವರನ್ನು ಯುದ್ಧ ಕೈದಿಗಳಾಗಿ ಸೆರೆ ಹಿಡಿಯುವುದು ನಮಗೆ ಧರ್ಮಸಮ್ಮತವಾಗಿದೆ. ಇನ್ನು ಅವರು (ಯುದ್ಧ ಮಾಡಿದವರು) ವಿಶ್ವಾಸಿಗಳಾಗಿದ್ದರೆ ಅವರನ್ನು ಯುದ್ಧ ಕೈದಿಗಳಾಗಿ ಸೆರೆಹಿಡಿಯುವುದು ಬಿಡಿ, ಅವರೊಂದಿಗೆ ಯುದ್ಧ ಮಾಡುವುದೇ ನಮಗೆ ಧರ್ಮಸಮ್ಮತವಲ್ಲ."

ನಾನು ಹೇಳಿದೆ: "ಸರಿ, ಇದು ನಿಮ್ಮ ಎರಡನೆ ಸಮಸ್ಯೆ. ನಿಮ್ಮ ಮೂರನೆ ಸಮಸ್ಯೆಯನ್ನು ಹೇಳಿರಿ."

ಅವರು ಹೇಳಿದರು: "ಅಮೀರುಲ್ ಮುಅ್‌ಮಿನೀನ್ (ವಿಶ್ವಾಸಿಗಳ ನಾಯಕ) ಎಂಬ ಬಿರುದನ್ನು ಅವರು ಕಿತ್ತು ಹಾಕಬೇಕು. ಅವರು ಅಮೀರುಲ್ ಮುಅ್‌ಮಿನೀನ್ ಅಲ್ಲದಿದ್ದರೆ ಮತ್ತೆ ಅವರು ಅಮೀರುಲ್ ಕಾಫಿರೀನ್ (ಅವಿಶ್ವಾಸಿಗಳ ನಾಯಕ) ಆಗಿರುವರು."

ನಾನು ಕೇಳಿದೆ: "ಇದಲ್ಲದೆ ನಿಮಗೆ ಬೇರೇನಾದರೂ ಸಮಸ್ಯೆಗಳಿವೆಯೇ?"

ಅವರು ಹೇಳಿದರು: "ಇದು (ಇದಕ್ಕೆ ಉತ್ತರಕೊಟ್ಟರೆ) ನಮಗೆ ಸಾಕು."

ನಾನು ಕೇಳಿದೆ: "ನಾನು ನಿಮಗೆ ಅಲ್ಲಾಹನ ಗ್ರಂಥದಿಂದ ಮತ್ತು ಅವನ ಸಂದೇಶವಾಹಕ(ﷺ)ರವರ ಸುನ್ನತ್ತಿನಿಂದ ಉತ್ತರ ಕೊಟ್ಟರೆ ನೀವು ಅದನ್ನು ಅರ್ಥಮಾಡಿಕೊಂಡು ಮರಳುವಿರಾ?"

ಅವರು ಹೇಳಿದರು: "ಹೌದು."

ನಾನು ಹೇಳಿದೆ: "ಅಲ್ಲಾಹನಿಗೆ ಸಂಬಂಧಿಸಿದ ವಿಚಾರಗಳಲ್ಲಿ ತೀರ್ಪು ನೀಡಲು ಅವರು [ಅಲೀ(ﷺ)ರವರು] ಜನರನ್ನು ನೇಮಿಸಿದ್ದಾರೆ ಎಂಬ ನಿಮ್ಮ ಸಮಸ್ಯೆಯ ಬಗ್ಗೆ ಹೇಳುವುದಾದರೆ, ನಾನು ನಿಮಗೆ ಅಲ್ಲಾಹನ ಗ್ರಂಥದಿಂದ ಓದಿಕೊಡುತ್ತೇನೆ. ಅದರಲ್ಲಿ ಅಲ್ಲಾಹು ಕಾಲು ದಿರ್ಹಮ್‌ನ ಎಂಟನೇ ಒಂದು ಭಾಗದ ಬಗ್ಗೆ ತನ್ನ ವತಿಯ ತೀರ್ಪನ್ನು ನೀಡಲು ಜನರನ್ನು ನೇಮಿಸಿರುವನು. ಈ ವಿಷಯದಲ್ಲಿ ತೀರ್ಪನ್ನು ನೀಡಲು ಅಲ್ಲಾಹು (ತಬಾರಕ ವತಆಲಾ) ಜನರಿಗೆ ಆದೇಶ ನೀಡಿದ್ದಾನೆ. ಅಲ್ಲಾಹು (ತಬಾರಕ ವತಆಲಾ) ಹೇಳಿದ ಈ ಮಾತನ್ನು ನೀವು ಅರ್ಥ ಮಾಡಿಕೊಂಡಿರುವಿರಾ?

﴿ يَا أَيُّهَا الَّذِينَ آمَنُوا لَا تَقْتُلُوا الصَّيْدَ وَأَنْتُمْ حُرُمٌ وَمَنْ قَتَلَهُ مِنْكُمْ مُتَعَمِّدًا فَجَزَاءٌ مِثْلُ مَا قَتَلَ مِنَ النَّعَمِ يَحْكُمُ بِهِ ذَوَا عَدْلٍ مِنْكُمْ هَدْيًا بَالِغَ الْكَعْبَةِ ﴾

"ಓ ಸತ್ಯವಿಶ್ವಾಸಿಗಳೇ! ನೀವು ಇಹ್ರಾಮ್‌ನಲ್ಲಿರುವಾಗ ಬೇಟೆಮೃಗವನ್ನು ಕೊಲ್ಲದಿರಿ. ನಿಮ್ಮಲ್ಲಿ ಯಾರಾದರೂ ಉದ್ದೇಶಪೂರ್ವಕವಾಗಿ ಅದನ್ನು ಕೊಂದರೆ ನಿಮ್ಮ ಪೈಕಿ ಇಬ್ಬರು ನ್ಯಾಯಸಮ್ಮತ ವ್ಯಕ್ತಿಗಳು ಅವನು ಕೊಂದಿರುವುದಕ್ಕೆ ಸಮಾನವೆಂದು ತೀರ್ಪು ನೀಡುವ ಜಾನುವಾರನ್ನು (ಅಥವಾ ಜಾನುವಾರುಗಳನ್ನು) ಕಅ್‌ಬಾಲಯಕ್ಕೆ ತಲುಪಬೇಕಾದ ಬಲಿಮೃಗವಾಗಿ ನೀಡಲಿ." [ಕುರ್‌ಆನ್ 5:95]

ಇದು ಅಲ್ಲಾಹು ತೀರ್ಪು ನೀಡಬೇಕಾದ ವಿಷಯದಲ್ಲಿ ಸೇರಿದ್ದಾಗಿದೆ. ಆದರೆ ಅವನು ಅದಕ್ಕಾಗಿ ಜನರನ್ನು ನೇಮಿಸಿದನು. ಅಲ್ಲಾಹು ಇಚ್ಛಿಸುತ್ತಿದ್ದರೆ ಅವನೇ ಸ್ವತಃ ಈ ವಿಷಯದಲ್ಲಿ ತೀರ್ಪು ನೀಡುತ್ತಿದ್ದನು. ಅದಕ್ಕಾಗಿ ಜನರನ್ನು ನೇಮಿಸುತ್ತಿರಲಿಲ್ಲ. ನಾನು ಅಲ್ಲಾಹನ ಹೆಸರಲ್ಲಿ ಕೇಳುತ್ತಿದ್ದೇನೆ. ಜನರು ಯಾವ ವಿಷಯಕ್ಕೆ ಸಂಬಂಧಿಸಿ ತೀರ್ಪು ನೀಡುವುದು ಉತ್ತಮ? ವಿವಾದಿತ ವಿಷಯದಲ್ಲಿ ಸಂಧಾನ ಮಾಡುವ ಮತ್ತು ರಕ್ತದೋಕುಳಿಯನ್ನು ತಡೆಯುವ ವಿಷಯದಲ್ಲೋ ಅಥವಾ (ಇಹ್ರಾಮ್‌ನಲ್ಲಿ) ಮೊಲವೊಂದನ್ನು ಬೇಟೆಯಾಡಿದ ವಿಷಯದಲ್ಲೋ?"

ಅವರು ಹೇಳಿದರು: "ಅನುಮಾನವೇ ಇಲ್ಲ. ಇದೇ (ರಕ್ತದೋಕುಳಿಯನ್ನು ತಡೆಯುವ) ವಿಷಯದಲ್ಲಿ."

ನಾನು ಹೇಳಿದೆ: "ಓರ್ವ ಮಹಿಳೆ ಮತ್ತು ಆಕೆಯ ಪತಿಗೆ ಸಂಬಂಧಿಸಿದಂತೆ (ಅಲ್ಲಾಹು ಹೇಳುತ್ತಾನೆ):

﴿ وَإِنْ خِفْتُمْ شِقَاقَ بَيْنِهِمَا فَابْعَثُوا حَكَمًا مِنْ أَهْلِهِ وَحَكَمًا مِنْ أَهْلِهَا ﴾

"ಇನ್ನು ಅವರು (ದಂಪತಿಗಳು) ಪರಸ್ಪರ ಬೇರ್ಪಡುವರೆಂದು ನೀವು ಭಯಪಡು ವುದಾದರೆ ಅವನ ಮನೆಯವರಿಂದ ಓರ್ವ ಮಧ್ಯಸ್ಥನನ್ನೂ, ಅವಳ ಮನೆಯ ವರಿಂದ ಓರ್ವ ಮಧ್ಯಸ್ಥನನ್ನೂ ಕಳುಹಿಸಿರಿ." [ಕುರ್‌ಆನ್ 4:35]

ಇದು ಅಲ್ಲಾಹು ತೀರ್ಪು ನೀಡುವ ವಿಷಯವಾಗಿದೆ. ಆದರೆ ಅವನು ಆ ವಿಷಯದಲ್ಲಿ ತೀರ್ಪು ನೀಡಲು ಜನರನ್ನು ನೇಮಿಸಿದ್ದಾನೆ. ಅಲ್ಲಾಹು ಇಚ್ಛಿಸುತ್ತಿದ್ದರೆ ಅವನೇ ಈ ವಿಷಯದಲ್ಲಿ ತೀರ್ಪು ನೀಡುತ್ತಿದ್ದನು. ಅವನು ತೀರ್ಪು ನೀಡಲು ಜನರಿಗೆ ಅನುಮತಿ ನೀಡುತ್ತಿರಲಿಲ್ಲ. ಅಲ್ಲಾಹನ ಹೆಸರಲ್ಲಿ ನಾನು ಕೇಳುತ್ತಿದ್ದೇನೆ. ಜನರು ಯಾವ ವಿಷಯಕ್ಕೆ ಸಂಬಂಧಿಸಿ ತೀರ್ಪು ನೀಡುವುದು ಉತ್ತಮ? ವಿವಾದಿತ ವಿಷಯದಲ್ಲಿ ಸಂಧಾನ ಮಾಡುವ ಮತ್ತು ರಕ್ತದೋಕುಳಿಯನ್ನು ತಡೆಯುವ ವಿಷಯದಲ್ಲೋ ಅಥವಾ ಮಹಿಳೆಯೊಬ್ಬಳ ಗುಪ್ತಾಂಗಕ್ಕೆ ಸಂಬಂಧಿಸಿದ ವಿಷಯದಲ್ಲೋ? ನಮ್ಮ ಮೊದಲನೆ ಸಮಸ್ಯೆ ಪರಿಹಾರವಾಯಿತಲ್ಲವೇ?"

ಅವರು ಹೇಳಿದರು: "ಹೌದು."

ನಾನು ಹೇಳಿದೆ: "ಅವರು [ಅಲೀ(ﷺ)ರವರು] ಯುದ್ಧಕೈದಿಗಳನ್ನು ಸೆರೆಹಿಡಿಯು ವುದಾಗಲಿ ಅಥವಾ ಸಮರಾರ್ಜಿತ ಸೊತ್ತನ್ನು ಪಡೆಯುವುದಾಗಲಿ ಮಾಡಲಿಲ್ಲ ಎಂಬ ನಿಮ್ಮ ಸಮಸ್ಯೆಯ ಬಗ್ಗೆ ಹೇಳುವುದಾದರೆ, ನೀವು ನಿಮ್ಮ ಮಾತೆ ಆಇಶಾ(ﷺ)ರವರನ್ನು ಯುದ್ಧಕೈದಿಯಾಗಿ ಸೆರೆಹಿಡಿಯುವಿರಾ? ಆಕೆ ನಿಮ್ಮ ಮಾತೆಯಾಗಿರುವಾಗ, ಇತರ (ಮಹಿಳಾ) ಕೈದಿಗಳನ್ನು ಸೆರೆಹಿಡಿದು ನಿಮಗೆ

ಧರ್ಮಸಮ್ಮತಗೊಳಿಸುವಂತೆ ಆಕೆಯನ್ನೂ ಧರ್ಮಸಮ್ಮತಗೊಳಿಸುವಿರಾ? ಇತರ ಕೈದಿಗಳನ್ನು ಸೆರೆಹಿಡಿದು ಧರ್ಮಸಮ್ಮತಗೊಳಿಸುವಂತೆ ಆಕೆಯನ್ನೂ ಧರ್ಮಸಮ್ಮತ ಗೊಳಿಸುವೆವೆಂದು ನೀವು ಹೇಳುವುದಾದರೆ, ಖಂಡಿತವಾಗಿಯೂ ನೀವು ಅವಿಶ್ವಾಸಿ ಗಳಾಗುವಿರಿ. ಇನ್ನು ಆಕೆ ನಮ್ಮ ಮಾತೆಯಲ್ಲ ಎಂದು ನೀವು ಹೇಳುವುದಾದರೆ ಆಗಲೂ ನೀವು ಅವಿಶ್ವಾಸಿಗಳಾಗುವಿರಿ. (ಅಲ್ಲಾಹು ಹೇಳುತ್ತಾನೆ:)

﴿ النَّبِيُّ أَوْلَى بِالْمُؤْمِنِينَ مِنْ أَنْفُسِهِمْ وَأَزْوَاجُهُ أُمَّهَاتُهُمْ ﴾

"ಸತ್ಯವಿಶ್ವಾಸಿಗಳಿಗೆ ಅವರ ಶರೀರಗಳಿಗಿಂತಲೂ ಹೆಚ್ಚು ಆಪ್ತರು ಸಂದೇಶವಾಹಕ ರಾಗಿರುವರು. ಅವರ ಮಡದಿಯರು ಅವರಿಗೆ ಮಾತೆಯರಾಗಿರುವರು." [ಕುರ್‌ಆನ್ 33:6]

ಆದ್ದರಿಂದ ನೀವು ಎರಡು ಕೆಟ್ಟ ಆಯ್ಕೆಗಳ ಮಧ್ಯೆಯಿರುವಿರಿ. ಇವುಗಳಲ್ಲಿ ನೀವು ಯಾವುದನ್ನು ಆರಿಸುವಿರಿ? ನಮ್ಮ ಈ ಸಮಸ್ಯೆಯು ಪರಿಹಾರವಾಯಿತಲ್ಲವೇ?"

ಅವರು ಹೇಳಿದರು: "ಹೌದು."

"ಇನ್ನು ಅಲೀ(ﷺ)ರವರು ಅಮೀರುಲ್ ಮುಅ್‌ಮಿನೀನ್ (ವಿಶ್ವಾಸಿಗಳ ನಾಯಕ) ಎಂಬ ಬಿರುದನ್ನು ಕಿತ್ತುಹಾಕಬೇಕು ಎಂಬುದರ ಬಗ್ಗೆ ಹೇಳುವುದಾದರೆ, ನಿಮಗೆ ಸಂತೃಪ್ತಿ ನೀಡುವ ಒಂದು ಉತ್ತರವನ್ನು ನಾನು ಕೊಡುತ್ತೇನೆ. ಅಲ್ಲಾಹನ ಸಂದೇಶವಾಹಕ(ﷺ)ರವರು ಹುದೈಬಿಯ್ಯಃ ದಿನದಂದು ಮುಶ್ರಿಕೀನ್‌ಗಳೊಂದಿಗೆ (ಕುರೈಶಿ ಅವಿಶ್ವಾಸಿಗಳೊಂದಿಗೆ) ಒಂದು ಒಪ್ಪಂದವನ್ನು ಮಾಡಿದರು. ಆಗ ಪ್ರವಾದಿ(ﷺ)ರವರು ಅಲೀ(ﷺ)ರವರೊಂದಿಗೆ ಹೇಳಿದರು:

اكْتُبْ يَا عَلِيُّ هَذَا مَا صَالَحَ عَلَيْهِ مُحَمَّدٌ رَسُولُ اللَّهِ

"ಓ ಅಲೀ, 'ಅಲ್ಲಾಹನ ರಸೂಲ್ ಆಗಿರುವ ಮುಹಮ್ಮದ್‌ರವರು ಒಪ್ಪಿಕೊಳ್ಳುವು ದೇನೆಂದರೆ' ಎಂದು ಬರೆಯಿರಿ."

ಆಗ ಕುರೈಶಿಗಳು ಹೇಳಿದರು: "ತಾವು ಅಲ್ಲಾಹನ ರಸೂಲ್ ಎಂದು ನಮಗೆ ತಿಳಿದಿರುತ್ತಿದ್ದರೆ ನಾವು ತಮ್ಮೊಂದಿಗೆ ಯುದ್ಧವನ್ನೇ ಮಾಡುತ್ತಿರಲಿಲ್ಲ."

ಆಗ ಪ್ರವಾದಿ(ﷺ)ರವರು ಹೇಳಿದರು:

اللَّهُمَّ تَعْلَمُ إِنِّي رَسُولُكَ امْحَ يَا عَلِيُّ وَاكْتُبْ هَذَا مَا صَالَحَ عَلَيْهِ مُحَمَّدُ بْنُ عَبْدِ اللَّهِ

"ಓ ಅಲ್ಲಾಹ್, ನಾನು ನಿನ್ನ ರಸೂಲ್ ಆಗಿರುವೆನೆಂದು ನಿನಗೆ ಗೊತ್ತಿದೆ. ಓ ಅಲೀ, ಅದನ್ನು ಅಳಿಸಿರಿ. ಅಬ್ದುಲ್ಲಾಹ್‌ರ ಮಗ ಮುಹಮ್ಮದ್ ಒಪ್ಪಿಕೊಳ್ಳುವುದೇನೆಂದರೆ ಎಂದು ಬರೆಯಿರಿ."

ಅಲ್ಲಾಹನ ಮೇಲೆ ಪ್ರಮಾಣ ಮಾಡಿ ನಾನು ಹೇಳುತ್ತೇನೆ. ಅಲ್ಲಾಹನ ರಸೂಲ್(ﷺ)ರವರು ಅಲೀ(رضي الله عنه)ರಿಗಿಂತ ಎಷ್ಟೋ ಉತ್ತಮರಾಗಿರುವರು. ಆದರೂ ಅವರು ತಮ್ಮ ಹೆಸರನ್ನು (ಬಿರುದನ್ನು) ಅಳಿಸಿದರು. ಆದರೆ ಅದರಿಂದಾಗಿ ಅವರ ಪ್ರವಾದಿತ್ವವು ಅಳಿಯಲಿಲ್ಲ. ನಮ್ಮ ಈ ಸಮಸ್ಯೆಯೂ ಪರಿಹಾರವಾಯಿತಲ್ಲವೇ?"

ಅವರು ಹೇಳಿದರು: "ಹೌದು."

ಹೀಗೆ ಅವರ ಪೈಕಿ 2,000 ಜನರು ಮರಳಿದರು. ಉಳಿದವರು ಅವರ ಅಪಗ್ರಹಿಕೆಯ ನಿಮಿತ್ತ ಬಂಡಾಯದಲ್ಲೇ ಉಳಿದು ಯುದ್ಧ ಮಾಡಿದರು. ಮುಹಾಜಿರ್ ಮತ್ತು ಅನ್ಸಾರ್‌ಗಳು ಅವರಿಗೆದುರಾಗಿ ಯುದ್ಧ ಮಾಡಿದರು.

[ಇದನ್ನು ಅಬ್ದುರ್ರಝ್ಝಾಕ್ ತಮ್ಮ 'ಅಲ್‌ಮುಸನ್ನಫ್'ನಲ್ಲಿ (18678), ಅಹ್ಮದ್ (1/243), ಅಲ್‌ಹಾಕಿಮ್ (2/150–152), ಇಬ್ನ್ ಅಬ್ದಿಲ್ ಬರ್ರ್ ತಮ್ಮ 'ಜಾಮಿಉ ಬಯಾನಿಲ್ ಇಲ್ಮ್'ನಲ್ಲಿ (2/962–964/ 1834) ಹಾಗೂ ಮತ್ತಿತರರು ವರದಿ ಮಾಡಿದ್ದಾರೆ. ಅದ್ದಾರಿಮೀ ತಮ್ಮ 'ಸುನನ್'ನಲ್ಲಿ (1/68–69) ಇದನ್ನು ಪರಾಮರ್ಶಿಸಿದ್ದಾರೆ. ಈ ವರದಿಯು ಅಮ್ರ್ ಇಬ್ನ್ ಸಲ್ಮಾರಿಂದ ವರದಿಯಾಗಿದ್ದು ಅಶ್ಶೈಖ್ ಅಲ್‌ಅಲ್ಬಾನೀ ಇದನ್ನು ಸಹೀಹ್ ಎಂದಿದ್ದಾರೆ.

ಈ ಸಂವಾದದ ಬಗ್ಗೆ ಅನೇಕ ಗ್ರಂಥಗಳಲ್ಲಿ ವ್ಯತ್ಯಸ್ತ ವರದಿಗಳಿವೆ. ಆ ಗ್ರಂಥಗಳಲ್ಲಿ ಕೆಲವು ಹೀಗಿವೆ:

1. ಅಬ್ದುಲ್ಲಾಹ್ ಇಬ್ನ್ ಅಹ್ಮದ್‌ರವರ 'ಝವಾಇದು ಝ್ಝುಹ್ದ್' (ಪುಟ 428)

2. ಅಬೂ ನಐಮ್‌ರವರ 'ಹಿಲ್ಯತುಲ್ ಔಲಿಯಾಅ್' (4/380–381)

3. ಅತ್ತಬರಾನೀಯವರ **‘ಮುಅ್‌ಜಮುಲ್ ಕಬೀರ್’** (9/125–126)

4. ಅಬ್ದುರ್ರಝ್ಝಾಕ್‌ರವರ **‘ಅಲ್‌ಮುಸನ್ನಫ್’** (5409)

5. ಅಲ್‌ಹೈಸಮೀರವರ **‘ಮಜ್ಮಉ ಝ್ಝವಾಇದ್’** (1/181)]

**وَصَلَّى اللهُ وَسَلَّم عَلَى نَبِيِّنَا مُحَمَّدٍ وَعَلى آلِهِ وَصَحْبِهِ أجْمَعِين .**

*********